ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 1505/2021

ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ,1

ದಿಃ **16.06.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಜವರೇಗೌಡ |
| ಗಂಡ/ತಂದೆಯ ಹೆಸರು | ಲಿಂಗೇಗೌಡ |
| ವಯಸ್ಸು | 60 ವರ್ಷ |
| ಕೆಲಸ | ನಿವೃತ್ತ ನೌಕರ |
| ವಾಸಸ್ಥಳ | ನಾಡಪ್ಪನ ಹಳ್ಳಿ |

**<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ. ಚಾಸಾ 2 ಮತ್ತು 3 ಗೊತ್ತು. ಚಾಸಾ**4** ನನ್ನ ಹೆಂಡತಿ. ನನ್ನ ಮತ್ತು ಆರೋಪಿಯ ನಡುವೆ ಸಣ್ಣ ವಿಚಾರಕ್ಕೆ ಜಗಳವಾಗಿದ್ದು, ಈ ಬಗ್ಗೆ ನಾನು ಪೊಲೀಸರಿಗೆ ಮೌಖಿಕವಾಗಿ ತಿಳಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಒಂದು ಬರವಣಿಗೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿ ತನ್ನ ಸಹಿ ಇರುವ ಒಂದು ಬರವಣಿಗೆಯನ್ನು ನೋಡಿ ಗುರುತಿಸಿದ್ದು, ಅದು ದೂರು ಆಗಿದ್ದು, ದೂರನ್ನು ನಿಪಿ-**1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ**1**(ಎ) ಎಂದು ಗುರುತಿಸಲಾಯಿತು. ನಿಪಿ-**1** ರಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸ.ಸ.ಅ. ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ ರವರಿಂದಃ</u>

ದಿಃ04.09.2021 ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ನಾನು ಮಹದೇಶ್ವರ ದೇವಸ್ಥಾನದ ಬೀದಿಯಲ್ಲಿ ಮನೆಗಳಿಗೆ ನಲ್ಲಿ ನೀರು ಬಿಟ್ಟು, ಚಾಸಾ3 ರವರ ಮನೆ ಮುಂಭಾಗದ ರಸ್ತೆಯಲ್ಲಿ ನಿಂತಿದ್ದಾಗ, ಅಲ್ಲಿಗೆ ಬಂದ ಆರೋಪಿ ಅವರ ಬೀದಿಗೆ ನೀರು ಬಿಡುವಂತೆ ಕೇಳಿದಾಗ ನಾನು ನಿಮ್ಮ ಬೀದಿಗೆ ನೀರು ಈಗಾಗಲೇ ಬಿಟ್ಟಿರುವುದಾಗಿ ಹೇಳಿದೆ, ಆಗ ಆರೋಪಿ ನಮ್ಮ ಮನೆಗೆ ಜೋರಾಗಿ ಬಿಡಿ ಎಂದು ಅವಾಚ್ಯಶಬ್ದಗಳಿಂದ ನಿಂದಿಸಿದರು ಎಂದರೆ ಸರಿಯಲ್ಲ. ನಂತರ ಆರೋಪಿ ನನ್ನ ಕತ್ತಿನ ಪಟ್ಟಿಯನ್ನು ಹಿಡಿದುಕೊಂಡು ನನ್ನ ಕೆನ್ನೆಗೆ ಕೈಯಿಂದ ಹೊಡೆದನು ಎಂದರೆ ಸರಿಯಲ್ಲ. ನಾನು ಈ ವಿಚಾರವನ್ನು ಅವರ ಮನೆಯವರಿಗೆ ತಿಳಿಸಲು ಹೋಗುತ್ತಿದ್ದಾಗ ಆರೋಪಿ ಅಲ್ಲೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ನನ್ನ ಬಲಮಂಡಿಗೆ ಹೊಡೆದನು ಎಂದರೆ

ಸರಿಯಲ್ಲ. ಅಷ್ಟರಲ್ಲಿ ಚಾಸಾ2 ರಿಂದ 4 ರವರು ಜಗಳವನ್ನು ಬಿಡಿಸಿದರು ಎಂದರೆ ಸರಿಯಲ್ಲ. ಚಾಸಾ5 ರವರು ನನ್ನನ್ನು ಕರೆದುಕೊಂಡು ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದರು ಎಂದರೆ ಸರಿಯಲ್ಲ. ಈಗ ಮೇಲೆ ಓದಿ ಹೇಳಿದ ಹಾಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ಹಾಗೂ ನೀವು ರಾಜಿ ಆಗಿರುತ್ತೇವೆಂದರೆ ಸರಿ. ರಾಜಿಯಾಗಿರುವ ಕಾರಣದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಇಲ್ಲ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.